# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 669 |
| ಉತ್ತರಿಸುವ ದಿನಾಂಕ | 21-02-2024 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಪಿ.ಯೋಗೇಶ್ವರ್ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ವಿರುಪ ಸಮುದ್ರ ಗ್ರಾಮ ವ್ಯಾಪ್ತಿಯಲ್ಲಿ ಭೂ ಪರಿವರ್ತನೆಯಾಗದ ವ್ಯವಸಾಯ ಭೂಮಿಯನ್ನು ವಾಣಿಜ್ಯ ಉದ್ದೇಶಕ್ಕೆ ಅಕ್ರಮವಾಗಿ ಉಪ ನೋಂದಣಿ ಕಛೇರಿಯಲ್ಲಿ ಲೀಸ್ ಡೀಡ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; | ಸರ್ಕಾರದ ಗಮನಕ್ಕೆ ಬಂದಿದೆ.<br><br>ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು, ಕಸಬಾ ಹೋಬಳಿಯ ವಿರುಪಸಮುದ್ರ ಗ್ರಾಮಕ್ಕೆ ಸಂಬಂಧಿಸಿದಂತೆ ಪಾವಗಡ ಉಪ ನೋಂದಣಿ ಕಛೇರಿಯಲ್ಲಿ ದಿನಾಂಕ:25-09-2023 ರಂದು ದಸ್ತಾವೇಜು ಸಂಖ್ಯೆ: 3157/2023-24 ರನ್ವಯ ಲೀಸ್ ಡೀಡ್ ಮಾಡಿರುವುದಕ್ಕೆ ಸಂಬಂಧಿಸಿದಂತೆ ಕಾನೂನು ಬಾಹಿರವಾಗಿ ನೋಂದಣಿಯಾಗಿರುವುದು ತುಮಕೂರು ಜಿಲ್ಲಾ ನೋಂದಣಾಧಿಕಾರಿಯವರ ವರದಿಯಿಂದ ಕಂಡು ಬಂದಿದ್ದು, ಪಾವಗಡದ ಪ್ರಭಾರ ಉಪ ನೋಂದಣಾಧಿಕಾರಿ ವಿರುದ್ಧ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಶಿಸ್ತು ಕ್ರಮ ಪ್ರಾರಂಭಿಸಲು ಕ್ರಮ ವಹಿಸಿರುತ್ತಾರೆ. |
| ಆ | ಅಕ್ರಮವಾಗಿ ಲೀಸ್ ಡೀಡ್ ಮಾಡಿರುವ ಬಗ್ಗೆ ಸರ್ಕಾರಕ್ಕೆ ಇದರ ವಿರುದ್ಧ ಇಲ್ಲಿಯವರೆಗೆ ಎಷ್ಟು ದೂರುಗಳು ಬಂದಿರುತ್ತದೆ; ಹಾಗಿದ್ದಲ್ಲಿ, ಬಂದಿರುವ ದೂರುಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | ಲೀಸ್ ಡೀಡ್ ಮಾಡಿರುವ ಬಗ್ಗೆ ಒಂದು ದೂರು ಸ್ವೀಕೃತಿಯಾಗಿದ್ದು, ಸದರಿ ಲೀಸ್ ಡೀಡ್ ಮಾಡಿರುವ ಉಪ ನೋಂದಣಾಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನೋಂದಣಾಧಿಕಾರಿ ವಿರುದ್ಧ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ಕಾರಣ ಕೇಳುವ ನೋಟೀಸ್ ಜಾರಿಗೊಳಿಸಿರುತ್ತಾರೆ. ಸದರಿಯವರ ಲಿಖಿತ ಹೇಳಿಕೆಯನ್ನು ಪಡೆದು ಶಿಸ್ತು ಕ್ರಮ ಜರುಗಿಸಲು ಕ್ರಮ ಕೈಗೊಳ್ಳಲಾಗುವುದು. |
| ಇ | ಮುಂದೆ ಈ ರೀತಿ ಅಕ್ರಮವಾಗಿ ಲೀಸ್ ಡೀಡ್ ಆಗದಿರುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಅಕ್ರಮವಾಗಿ ನೊಂದಣಿ ಮಾಡುವುದನ್ನು ತಡೆಗಟ್ಟಲು ಕಾವೇರಿ-2 ತಂತ್ರಾಂಶದೊಂದಿಗೆ ವಿವಿಧ ಇಲಾಖೆಗಳ ತಂತ್ರಾಂಶಗಳ ಜೋಡಣೆ ಮಾಡಲಾಗುತ್ತಿದೆ ಹಾಗು ಕಾಯದೆ ಕಾನುನುಗಳಲ್ಲಿ ಅಗತ್ಯ ತಿದ್ದುಪಡಿಗಳನ್ನು ತರಲಾಗುತ್ತದೆ. |

ಕಂಇ/33/ಎಂಎನ್‌ಎಸ್‌ಎ/2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು